## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 509
ಸದಸ್ಯರ ಹೆಸರು : ಶ್ರೀ. ಎಸ್.ವಿ. ಸಂಕನೂರ (ಪದವೀಧರರ ಕ್ಷೇತ್ರ)
ಉತ್ತರಿಸುವವರು : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕ ಸಬಲೀಕರಣ ಸಚಿವರು.
ಉತ್ತರಿಸಬೇಕಾದ ದಿನಾಂಕ : 30.01.2026.

******

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ 2021 ರಿಂದ 2026 ರವರೆಗೆ ಹದಿಹರೆಯಾದ ಹೆಣ್ಣು ಮಕ್ಕಳು ಗರ್ಭಧಾರಣೆ ಹೊಂದಿರುವ ಪ್ರಕರಣಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು): | ರಾಜ್ಯದಲ್ಲಿ 2021 ರಿಂದ 2026 ರವರೆಗೆ RCH ಪೋರ್ಟಲ್ ನಲ್ಲಿ 18 ವರ್ಷದೊಳಗಿನ ಹದಿಹರಿಯದ ಹೆಣ್ಣು ಮಕ್ಕಳು ಗರ್ಭಧಾರಣೆ ಹೊಂದಿರುವ ಪ್ರಕರಣಗಳ ಸಂಖ್ಯೆಯ ಮಾಹಿತಿಯು ಈ ಕೆಳಕಂಡಂತಿದೆ.<br><table><tr><th>ಕ್ರ. ಸಂ</th><th>ವರ್ಷ</th><th>ಬಾಲಗರ್ಭಿಣಿಯರಸಂಖ್ಯೆ</th></tr><tr><td>1</td><td>2021-22</td><td>11806</td></tr><tr><td>2</td><td>2022-23</td><td>13527</td></tr><tr><td>3</td><td>2023-24</td><td>8578</td></tr><tr><td>4</td><td>2024-25</td><td>4567</td></tr><tr><td>5</td><td>2025-26</td><td>2726</td></tr><tr><td colspan="2">ಒಟ್ಟು</td><td>41204</td></tr></table>(ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ |
| ಆ) | ನಗರ ಪ್ರದೇಶಗಳಲ್ಲಿ ಈ ಪ್ರಕರಣಗಳು ಹೆಚ್ಚಾಗುತ್ತಿರುವುದಕ್ಕೆ ಸರ್ಕಾರಿ ನಡೆಸಿದ ಅಧ್ಯಯನ ವರದಿ ಇದೆಯೇ: ಇದ್ದರೆ, ಅದರ ಪ್ರಮುಖ ಕಾರಣಗಳು ಯಾವುವು; | ನಗರ ಪ್ರದೇಶಗಳಲ್ಲಿ ಈ ಪ್ರಕರಣಗಳು ಹೆಚ್ಚಾಗುತ್ತಿರುವುದಕ್ಕೆ ಸರ್ಕಾರ ನಡೆಸಿದ ಅಧ್ಯಾಯನದ ವರದಿ ಇರುವುದಿಲ್ಲ. |
| ಇ) | ಬಾಲ್ಯವಿವಾಹ ನಿಷೇಧ ಕಾಯ್ದೆ ಹಾಗೂ ಪೋಕ್ಸೋ ಕಾಯ್ದೆ ಜಾರಿಯಲ್ಲಿ ಜಿಲ್ಲಾವಾರು ಎಷ್ಟು ಪ್ರಕರಣಗಳು ದಾಖಲಾಗಿವೆ: ಮತ್ತು ಎಷ್ಟು ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಲಾಗಿದೆ: | • ಬಾಲ್ಯ ವಿವಾಹ ಪ್ರಕರಣಗಳ ಮಾಹಿತಿ ಮತ್ತು ದಾಖಲಾದ ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಿದ ಪ್ರಕರಣಗಳ ಮಾಹಿತಿಯನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ.<br>• ಪೋಕ್ಸೋ ಪ್ರಕರಣಗಳ ಮಾಹಿತಿ ಮತ್ತು ದಾಖಲಾದ ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಿದ ಪ್ರಕರಣಗಳ ಮಾಹಿತಿಯನ್ನು ಅನುಬಂಧ-3ರಲ್ಲಿ ಲಗತ್ತಿಸಿದೆ. |
| ಈ) | ಹದಿಹರೆಯದ ತಾಯಂದಿರ ಪುನರ್ವಸತಿ, ಆರೋಗ್ಯ ಸೇವೆ, ಶಿಕ್ಷಣ ಮುಂದುವರಿಕೆಗೆ ಸರ್ಕಾರ ಹೊಂದಿರುವ ವಿಶೇಷ ಯೋಜನೆಗಳೇನು: | ಹದಿಹರೆಯದ ತಾಯಂದಿರ ಪುನರ್ವಸತಿ, ಆರೋಗ್ಯ ಸೇವೆ, ಶಿಕ್ಷಣ ಮುಂದುವರಿಕೆಗೆ ಸರ್ಕಾರ ಕೈಗೊಂಡಿರುವ ವಿಶೇಷ ಯೋಜನೆಗಳ ವಿವರ:<br>• ಬಾಲಗರ್ಭಿಣಿಯರಿಗೆ ಆಪ್ತ ಸಮಾಲೋಚನೆ ಮತ್ತು ಕಾನೂನು ಸಲಹೆಗಾಗಿ ಪೋಕ್ಸೊ ಕಾಯ್ದೆ ಸೆಕ್ಷನ್ 39 ರಡಿ ಬೆಂಬಲ ವ್ಯಕ್ತಿಗಳನ್ನು ನೇಮಿಸಲಾಗಿದೆ. |

- ಪೋಕ್ಸೊ ಕಾಯ್ದೆಯ ಸೆಕ್ಷನ್ 4 & 6 ರಡಿ ಸಂತ್ರಸ್ಥ ಬಾಲಗರ್ಭಿಣಿಯರಿಗೆ ಈ ಕೆಳಗಿನ ಸೌಲಭ್ಯಗಳನ್ನು ನೀಡಲಾಗುವುದು.

1. **ವಾಸ್ತವ್ಯಕ್ಕೆ ಸುರಕ್ಷತೆ ಸ್ಥಳಾವಕಾಶ:**
   ಮಕ್ಕಳ ಪಾಲನಾ ಕೇಂದ್ರಗಳಲ್ಲಿ ಸಂತ್ರಸ್ಥೆಗೆ **18** ವರ್ಷ ವಯಸ್ಸು ಪೂರ್ತಿಗೊಳ್ಳುವವರೆಗೆ ವಾಸ್ಯವ್ಯಕ್ಕೆ ಅವಕಾಶ ಮಾಡಿಕೊಡಲಾಗುವುದು ಹಾಗೂ **23** ವರ್ಷದವರೆಗೂ ಅವಶ್ಯಕ ಬೆಂಬಲ ನೀಡಲಾಗುವುದು.
2. **ಆರೋಗ್ಯ ಸೇವೆ ಮತ್ತು ವೈದ್ಯಕೀಯ ತಪಾಸಣೆ:**
   The Janani Suraksha Yojana (JSY), The Janani Shishu Suraksha Karyakram (JSSK) and Pradhan Mantri Matru Vandana Yojana (PMMVY) ರಡಿಯಲ್ಲಿ ಆರೋಗ್ಯ ಸೇವೆ ಮತ್ತು ವೈದ್ಯಕೀಯ ತಪಾಸಣೆಗೆ ರೂ.6000/-ಒಂದು ಬಾರಿಗೆ ಆರ್ಥಿಕ ಸಹಾಯವಾಗಿ ನೀಡಲಾಗುವುದು.
3. **ಆಪ್ತ ಸಮಾಲೋಚನೆ ಮತ್ತು ಮಾನಸಿಕ ಆರೋಗ್ಯ ಸೇವೆಗಳು:**
   ಆಘಾತದಿಂದ ಹೊರ ಬರಲು ಅಗತ್ಯ ಆಪ್ತ ಸಮಾಲೋಚನೆ ಮತ್ತು ಇತರೆ ಮಾನಸಿಕ ಆರೋಗ್ಯ ಸೇವೆಗಳನ್ನು ನೀಡಲಾಗುವುದು.
4. **ಶೈಕ್ಷಣಿಕ ಮತ್ತು ಕೌಶಲ್ಯ ತರಬೇತಿ:**
   ಶಿಕ್ಷಣವನ್ನು ಮುಂದುವರೆಸಲು ಅಥವಾ ಕೌಶಲ್ಯ ತರಬೇತಿಯನ್ನು ಹೊಂದಲು ಅವಕಾಶ ಮಾಡಿಕೊಡಲಾಗುವುದು.
5. **ಸುರಕ್ಷಿತ ಪ್ರಯಾಣ ಮತ್ತು ಆರಕ್ಷಕ ಸೇವೆ:**
   ನ್ಯಾಯಾಲಯ, ಆಸ್ಪತ್ರೆ, ಶಾಲೆ ಮತ್ತು ಇತರ ಸ್ಥಳಗಳಿಗೆ ಪ್ರಯಾಣ ಮಾಡಲು ಸಾರಿಗೆ ವ್ಯವಸ್ಥೆ ಮತ್ತು ಪ್ರಯಾಣಕ್ಕಾಗಿ ಸುರಕ್ಷತೆಯ ವ್ಯವಸ್ಥೆ ಮಾಡಲಾಗುವುದು. ಸಂತ್ರಸ್ಥೆಯ ಸುರಕ್ಷತೆಗೆ ಅಪಾಯ ಸಂಭವವಿದ್ದಲ್ಲಿ ಆರಕ್ಷಕರ ರಕ್ಷಣೆಯನ್ನು ಕೂಡ ಒದಗಿಸಲಾಗುವುದು.
6. **ಕಾನೂನು ನೆರವು:**
   ಸಂತ್ರಸ್ಥೆಗೆ ನ್ಯಾಯ ಒದಗಿಸಿ ಕೊಡಲು ಉಚಿತ ಕಾನೂನು ನೆರವು ಮತ್ತು ಸಮಾಲೋಚನೆಯ ವ್ಯವಸ್ಥೆ ಮಾಡಲಾಗುವುದು.
7. **ಆರೋಗ್ಯ ವಿಮಾ ಸೌಲಭ್ಯ:**
   Pradhan Mantri Jan Arogya Yojana (PM-JAY) ಅಡಿಯಲ್ಲಿ ವರ್ಷಕ್ಕೆ ರೂ.5.00 ಲಕ್ಷಗಳ ಆರೋಗ್ಯ ವಿಮೆಯನ್ನು ಸಂತ್ರಸ್ಥೆಗೆ ಮತ್ತು ಅವಳ ನವಜಾತ ಶಿಶುವಿಗೆ ನೀಡಲಾಗುವುದು.
8. **ಮಿಷನ್ ವಾತ್ಸಲ್ಯದಡಿ ಆರೈಕೆ:**
   ಸಂತ್ರಸ್ಥೆಗೆ ಸಾಂಸ್ಥಿಕ ಪೋಷಣೆ ಅಥವಾ ಪ್ರಾಯೋಜಕತ್ವದ ಮೂಲಕ ಪ್ರತಿ ತಿಂಗಳಿಗೆ ರೂ.4,000/-ಗಳಂತೆ ಅಸಾಂಸ್ಥಿಕ ಪೋಷಣೆ ಒದಗಿಸಲಾಗುವುದು. ಸಂತ್ರಸ್ಥೆಗೆ 23 ವರ್ಷ ಆಗುವ ವರೆಗೆ ಅಥವಾ ಅವಳಿಗೆ ಉದ್ಯೋಗ ದೊರಕುವವರೆಗೆ (ಇದರಲ್ಲಿ ಯಾವುದು ಮೊದಲೊ ಅಲ್ಲಿಯವರೆಗೆ) ಮಿಷನ್ ವಾತ್ಸಲ್ಯದಡಿ ಸಾಂಸ್ಥಿಕ ಆರೈಕೆಯ ಅವಧಿಯ ನಂತರ ಬೆಂಬಲ ನೀಡಲಾಗುವುದು.

| | | |
|---|---|---|
| | | 9. ಮಕ್ಕಳ ಪಾಲನಾ ಕೇಂದ್ರಗಳಲ್ಲಿ ಬಾಲ ಗರ್ಭಿಣಿಯರು, ಬಾಲ ತಾಯಂದಿರು ಮತ್ತು ನವಜಾತ ಶಿಶುವಿಗೆ ಆರೈಕೆ, ಪೋಷಣೆ ಹಾಗೂ ರಕ್ಷಣೆ ಸಂಬಂಧ ಪಾಲಿಸಬೇಕಾದ ಕ್ರಮ ಬದ್ಧ ಕಾರ್ಯವಿಧಾನ ಮಾರ್ಗಸೂಚಿಯನ್ನು ಹೊರಡಿಸಲು ಕ್ರಮವಹಿಸಲಾಗಿದೆ. |
| ಉ) | ಮುಂದಿನ ದಿನಗಳಲ್ಲಿ ಈ ಸಮಸ್ಯೆ ತಡೆಗಟ್ಟಲು ಸರ್ಕಾರ ಕೈಗೊಳ್ಳಲಿರುವ ಕಟ್ಟುನಿಟ್ಟಿನ ನೀತಿ ಕ್ರಮಗಳ ರೂಪುರೇಷೆ ಏನು? | **ಸದರಿ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳು:**<br>• ಅಪ್ರಾಪ್ತ ವಯಸ್ಸಿನ ಮಕ್ಕಳ ಮೇಲೆ ನಡೆಯುವ ಯಾವುದೇ ರೀತಿಯ ದೌರ್ಜನ್ಯವನ್ನು ತಡೆಗಟ್ಟಲು ಮತ್ತು ರಕ್ಷಣೆ ನೀಡಿ ನ್ಯಾಯ ಒದಗಿಸಲು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೋ)ಕಾಯ್ದೆ-2012 ಗಳನ್ನು ಅನುಷ್ಠಾನಗೊಳಿಸಲಾಗಿದೆ.<br>• ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ, 2015ರ ಕಾಯ್ದೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಮತ್ತು ಮಕ್ಕಳ ಮೇಲೆ ಆಗುವ ದೌರ್ಜನ್ಯಗಳಿಗೆ ಈ ಕಾಯ್ದೆಯಡಿ ಕಾನೂನು ಕ್ರಮ ಜರುಗಿಸಲಾಗುತ್ತದೆ.<br>• ಬಾಲ್ಯವಿವಾಹ ನಿಷೇಧ ಕಾಯ್ದೆ-2006ನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗಿದೆ.<br>• ಬಾಲ್ಯ ವಿವಾಹ ನಿಷೇಧ ಕಾಯ್ದೆ-2006ನ್ನು ಅನುಷ್ಠಾನಗೊಳಿಸಲು ಬಾಲ್ಯ ವಿವಾಹ ನಿಷೇಧ (ಕರ್ನಾಟಕ) ನಿಯಮಗಳು-2014ನ್ನು ರಚಿಸಲಾಗಿದೆ.<br>• ಬಾಲ್ಯ ವಿವಾಹಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ತಡೆಗಟ್ಟಲು ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಕಾಯ್ದೆ-2016ನ್ನು ಜಾರಿಗೆ ತರಲಾಗಿದೆ<br>• ಬಾಲ್ಯವಿವಾಹ, ಬಾಲಗರ್ಭಿಣಿ ಮತ್ತು ಪೋಕ್ಸೋ ಪ್ರಕರಣಗಳನ್ನು ತಡೆಯುವಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸಲು ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಸಮನ್ವಯ ಮತ್ತು ಪರಿಶೀಲನಾ ಸಮಿತಿಗಳನ್ನು ಹಾಗೂ ಗ್ರಾಮ ಪಂಚಾಯಿತ್ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಗಳನ್ನು ದಿನಾಂಕ:22.01.2014ರಂದು ರಚಿಸಲಾಗಿದೆ.<br>• ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ, ಬಾಲ್ಯ ವಿವಾಹ ನಿಷೇಧ ಹಾಗೂ ಸಮಗ್ರ ಮಕ್ಕಳ ರಕ್ಷಣೆಗಾಗಿ ರಚಿಸಲಾಗಿರುವ ಸಮಿತಿಗಳನ್ನು ವಿಲೀನಗೊಳಿಸಿ ದಿನಾಂಕ06.08.2019ರಂದು ಮಹಿಳೆಯರ ಮತ್ತು ಮಕ್ಕಳ ಕಾವಲು ಸಮಿತಿಯನ್ನು ರಚಿಸಲಾಗಿದೆ.<br>• ಮಕ್ಕಳ ಸಹಾಯವಾಣಿ-1098 24*7 ಮಕ್ಕಳ ಸುರಕ್ಷತೆಗಾಗಿ ಕಾರ್ಯ ನಿರ್ವಹಿಸುತ್ತಿದೆ. ಸಂಕಷ್ಟದಲ್ಲಿರುವ ಮಗುವಿನ ಬಗ್ಗೆ ಯಾವುದೇ ಸಮಯದಲ್ಲಿ ಕರೆ ಸ್ವೀಕೃತವಾದರೂ ತಕ್ಷಣ ಮಗುವನ್ನು ರಕ್ಷಿಸಲು ಸಂಬಂಧಿಸಿದ ಅಧಿಕಾರಿಗಳು ಕಾರ್ಯ ಪ್ರವೃತ್ತರಾಗಿರುತ್ತಾರೆ.<br>• ದಿನಾಂಕ:11.08.2024 ರಿಂದ "ವಾತ್ಸಲ್ಯವಾಣಿ ಎಂಬ 13 ವಾರಗಳ ಸರಣಿ ಕಾರ್ಯಕ್ರಮವನ್ನು ಆಕಾಶವಾಣಿ ಮೂಲಕ ಪ್ರಸಾರ ಮಾಡಲಾಗುತ್ತಿದ್ದು, ಈ ಕಾರ್ಯಕ್ರಮದಲ್ಲಿ ಮಾನ್ಯ ಇಲಾಖಾ ಸಚಿವರು, ಇಲಾಖಾ ಕಾರ್ಯದರ್ಶಿಗಳು, ನಿರ್ದೇಶಕರು ಸೇರಿದಂತೆ ಹಲವು ಅಧಿಕಾರಿಗಳು ಭಾಗವಹಿಸಿ ಜಾಗೃತಿ ಮೂಡಿಸಿದ್ದಾರೆ.<br>• ರಾಜ್ಯಾದ್ಯಂತ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಶಾಲೆಗಳು, ವಿವಿಧ ಇಲಾಖೆಗಳು ಮತ್ತು ಸಾರ್ವಜನಿಕರಿಗೆ ಅರಿವು ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳಲಾಗಿದ್ದು, ಸುಮಾರು 10 ಲಕ್ಷ ಭಾಗೀದಾರರು ಸಾರ್ವಜನಿಕರು ಒಳಗೊಂಡಂತೆ ಪ್ರಯೋಜನ ಪಡೆದಿರುತ್ತಾರೆ. |

| | | |
|---|---|---|
| | | • ಪ್ರತಿ ಜಿಲ್ಲೆಯಲ್ಲೂ ಮಕ್ಕಳ ಕಲ್ಯಾಣ ಸಮಿತಿ, ಬಾಲನ್ಯಾಯ ಮಂಡಳಿ, ಮಕ್ಕಳ ವಿಶೇಷ ಪೊಲೀಸ್ ಘಟಕ, ಮಕ್ಕಳ ಪಾಲನಾ ಸಂಸ್ಥೆ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು ಪಾಲನೆ/ ಪೋಷಣೆ ಅವಶ್ಯಕತೆ ಇರುವ ಮಕ್ಕಳು ಮತ್ತು ಕಾನೂನು ಸಂಘರ್ಷಕ್ಕೊಳಗಾದ ಮಕ್ಕಳ ಪುನರ್ವಸತಿಗೋಸ್ಕರ ಕಾರ್ಯ ನಿರ್ವಹಿಸುತ್ತಿವೆ.<br>• ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ಮಹಿಳೆಯರ ಮತ್ತು ಮಕ್ಕಳ ಹಕ್ಕುಗಳ ಕಾವಲು ಸಮಿತಿಯನ್ನು ರಚಿಸಲಾಗಿದೆ.<br>• ಬಾಲಗರ್ಭಿಣಿಯರ ಪ್ರಕರಣಗಳಿಗೆ ಸಂಬಂಧಿಸಿದಂತೆ, ದಿನಾಂಕ:06.09.2024ರ ಸರ್ಕಾರದ ಆದೇಶದಂತೆ ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳು ಬಾಲಗರ್ಭಿಣಿಯರಾಗುವುದನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ವಿವಿಧ ಇಲಾಖೆಗಳಿಗೆ ಜವಾಬ್ದಾರಿಗಳನ್ನು ನಿಗದಿಪಡಿಸಲಾಗಿದೆ.<br>• ಬಾಲಗರ್ಭಿಣಿಯರ ಪ್ರಕರಣಗಳನ್ನು ತಡೆಗಟ್ಟುವ ಸಂಬಂಧ ಪ್ರಸ್ತುತ ವರ್ಷ ಅಧಿಕಾರಿ/ ಸಿಬ್ಬಂದಿಗಳ ಸಾಮರ್ಥ್ಯಾಭಿವೃದ್ಧಿ ತರಬೇತಿ ಆಯೋಜಿಸಲು ಕ್ರಮ ವಹಿಸಲಾಗುತ್ತಿದೆ.<br>• ಲೈಂಗಿಕ ದೌರ್ಜನ್ಯಕ್ಕೊಳಗಾದ ಸಂತ್ರಸ್ಥ ಮಗುವಿಗೆ ಕಾನೂನು ಸಲಹೆ ಮತ್ತು ಆಪ್ತ ಸಮಾಲೋಚನೆಗಾಗಿ ಪ್ರತಿಯೊಂದು ಜಿಲ್ಲೆಯಲ್ಲೂ ಬೆಂಬಲ ವ್ಯಕ್ತಿಗಳನ್ನು ಮಾನ್ಯ ಸರ್ವೋಚ್ಚನ್ಯಾಯಾಲಯದ ಆದೇಶದಂತೆ ಆಯ್ಕೆ ಮಾಡಿ ಸಂತ್ರಸ್ಥರ ಬೇಡಿಕೆಗಳಿಗೆ ಸ್ಪಂದಿಸಲು ತರಬೇತಿ ನೀಡಲಾಗಿದೆ.<br>• ಬಾಲ್ಯ ವಿವಾಹಗಳನ್ನು ತಡೆಗಟ್ಟುವುದಕ್ಕಾಗಿ ವಿವಿಧ ಭಾಗೀದಾರ ಇಲಾಖೆಗಳ ಕರ್ತವ್ಯಗಳ ಕುರಿತಂತೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ (NCPCR)ವತಿಯಿಂದ ಕ್ರಮ ಬದ್ಧ ಕಾರ್ಯವಿಧಾನ ರಚನೆಯಾಗಿದ್ದು, ಭಾಗೀದಾರ ಇಲಾಖೆಗಳಿಗೆ ಸದರಿ ಕಾರ್ಯ ವಿಧಾನದಂತೆ ಕಾರ್ಯನಿರ್ವಹಿಸಲು ಈಗಾಗಲೇ ತಿಳಿಸಲಾಗಿದೆ.<br>• ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:1234/2017ರ ದಿನಾಂಕ:18.10.2024ರ ನಿರ್ದೇಶನದಲ್ಲಿ ಬಾಲ್ಯವಿವಾಹ ತಡೆಗಟ್ಟುವಲ್ಲಿ ವಿವಿಧ ಭಾಗೀದಾರ ಇಲಾಖೆಗಳು, ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ತಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗದಿಪಡಿಸಿದೆ.<br>• ಲೈಂಗಿಕ ದೌರ್ಜನ್ಯಕ್ಕೊಳಗಾದ ಸಂತ್ರಸ್ಥ ಮಗುವಿಗೆ ಕಾನೂನು ಸಲಹೆ ಮತ್ತು ಆಪ್ತ ಸಮಾಲೋಚನೆಗಾಗಿ ಪ್ರತಿಯೊಂದು ಜಿಲ್ಲೆಯಲ್ಲೂ ಬೆಂಬಲ ವ್ಯಕ್ತಿಗಳನ್ನು ಮಾನ್ಯ ಸರ್ವೋಚ್ಚನ್ಯಾಯಾಲಯದ ಆದೇಶದಂತೆ ಆಯ್ಕೆಮಾಡಿ ಸಂತ್ರಸ್ಥರ ಬೇಡಿಕೆಗಳಿಗೆ ಸ್ಪಂದಿಸಲು ತರಬೇತಿ ನೀಡಲಾಗಿದೆ.<br>• ಬಾಲ್ಯವಿವಾಹದ ಪ್ರಯತ್ನ, ನಿಶ್ಚಿತಾರ್ಥದ ಬಗ್ಗೆ ಕ್ರಮ ಕೈಗೊಳ್ಳಲು ಬಾಲ್ಯವಿವಾಹ ನಿಷೇಧ ಕಾಯ್ದೆ-2006 ರಲ್ಲಿ ಯಾವುದೇ ಕಲಂಗಳಲ್ಲಿ ಅವಕಾಶ ಇಲ್ಲದೇ ದೂರನ್ನು ದಾಖಲಿಸಲು ಸಾಧ್ಯವಾಗುತ್ತಿಲ್ಲವಾದ್ದರಿಂದ ಇದನ್ನು ಅಪರಾಧವನ್ನಾಗಿಸಲು ಬಾಲ್ಯ ವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ-2025) ಅನ್ನು ಜಾರಿಗೆ ತರಲು ಕ್ರಮವಹಿಸಲಾಗುತ್ತಿದೆ.<br>• ರಾಜ್ಯದ ಎಲ್ಲಾ ಶಾಲಾ ಕಾಲೇಜು ವಸತಿ ನಿಲಯ ಹಾಗೂ ತರಬೇತಿ ಸಂಸ್ಥೆಗಳಲ್ಲಿ ಮಕ್ಕಳ ಹಕ್ಕುಗಳು ಬಾಲಗರ್ಭಿಣಿ ಪೋಕ್ಸೋ ಬಾಲ್ಯವಿವಾಹ ಹಾಗೂ ಮಕ್ಕಳ ಸಹಾಯವಾಣಿ-1098 ಮಕ್ಕಳಿಗೆ ಅರಿವು ಜಾಗೃತಿ ಮೂಡಿಸುವ ಕುರಿತು ವಿವಿಧ ಇಲಾಖೆಗಳು ನಿಗಾವಹಿಸಬೇಕಾದ ಆದ್ಯತೆಯ ಅಂಶಗಳ ಕುರಿತು 07 ಇಲಾಖೆಗಳಿಂದ ದಿನಾಂಕ:13.10.2025 ರಂದು ಜಂಟಿ |

| | | |
|---|---|---|
| | | ಸುತ್ತೋಲೆಯನ್ನು ಹೊರಡಿಸಲಾಗಿದೆ.<br>• ಮಹಿಳೆಯರು ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಗಟ್ಟಲು ಬಾಲ್ಯವಿವಾಹಗಳನ್ನು ತಡೆಯಲು ಹಾಗೂ ಸಮಗ್ರ ಮಕ್ಕಳ ರಕ್ಷಣೆಗಾಗಿ ಪ್ರತಿಗ್ರಾಮಪಂಚಾಯತಿಯಲ್ಲಿ ರಚಿಸಲಾಗಿರುವ ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿಯ ರೀತಿಯಲ್ಲಿ ನಗರ ಮತ್ತು ಪಟ್ಟಣಗಳ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿಯನ್ನು ರಚಿಸಿ ದಿನಾಂಕ:26.11.2025 ರಂದು ಸರ್ಕಾರದಿಂದ ಅಧಿಸೂಚನೆ ಹೊರಡಿಸಲಾಗಿದೆ.<br>• ಬಾಲ್ಯವಿವಾಹ ತಡೆಗಟ್ಟುವ ಕಾರ್ಯವನ್ನು ಸುಲಲಿತವಾಗಿ ನಿರ್ವಹಿಸಲು ಇರುವ ಸುರಕ್ಷಿಣಿ ಎಂಬ ವೆಬ್ ಪೋರ್ಟಲ್ ಅನ್ನು ಪ್ರಸ್ತುತ ಅಭಿವೃದ್ಧಿಗೊಳಿಸಲು ಪ್ರತ್ಯೇಕ ಮೊಬೈಲ್ ಅಪ್ ಅನ್ನು ಸಿದ್ಧಪಡಿಸಲು ಕ್ರಮವಹಿಸಲಾಗುತ್ತಿದೆ.<br>• ಮಕ್ಕಳ ಪಾಲನಾ ಕೇಂದ್ರಗಳಲ್ಲಿ ದಾಖಲಾಗುವ ಬಾಲಗರ್ಭಿಣಿ/ಬಾಲತಾಯಿ ಮತ್ತು ನವಜಾತ ಶಿಶುವಿಗೆ ಸಂಬಂಧಿಸಿದಂತೆ ಪಾಲಿಸಬೇಕಾದ ಕ್ರಮಬದ್ಧ ಕಾರ್ಯವಿಧಾನವನ್ನು (SOP) ದಿನಾಂಕ:02.09.2025ರಂದು ಜಾರಿಗೊಳಿಸಲಾಯಿತು.<br>• ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಮಟ್ಟದಲ್ಲಿ ಬಾಲ್ಯ ವಿವಾಹಗಳ ದುಷ್ಪರಿಣಾಮಗಳನ್ನು ತಡೆಗಟ್ಟಲು, ಅಪ್ರಾಪ್ತ ವಯಸ್ಸಿನ ಬಾಲಕಿಯರು ಬಾಲ ಗರ್ಭಿಣಿಯರಾಗುವುದನ್ನು ಮತ್ತು ಪೋಕ್ಸೋ ಪ್ರಕರಣಗಳನ್ನು ನಿಯಂತ್ರಿಸಲು ಸಾರ್ವಜನಿಕರಿಗೆ ಅರಿವು ಮೂಡಿಸಲು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br>• ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟಲು ಮತ್ತು ಪಾಲನೆ ಪೋಷಣೆ ಅವಶ್ಯಕತೆ ಇರುವ ಮಕ್ಕಳ ಸುರಕ್ಷತೆಗಾಗಿ ಪ್ರತಿ ಜಿಲ್ಲೆಯಲ್ಲಿ ಮಕ್ಕಳ ಕಲ್ಯಾಣ ಸಮಿತಿ, ಬಾಲನ್ಯಾಯ ಮಂಡಲಿ, ಎಸ್.ಜೆ.ಪಿ.ಯು, ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ.<br>• ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ತಕ್ಷಣಕ್ಕೆ ನೆರವಾಗಲು ಇಲಾಖೆಯಿಂದ 'ಅಕ್ಕಪಡೆ'ಯನ್ನು ರಚಿಸಿ ಕಾರ್ಯರೂಪಕ್ಕೆ ತರಲಾಗಿದೆ.<br>• ಪೋಕ್ಸೋ ಕಾಯ್ದೆಯಡಿ ಸಂತ್ರಸ್ತರಿಗೆ ನೆರವಾಗಲು NCPCR ಮಾರ್ಗಸೂಚಿಯನ್ವಯ ರಾಜ್ಯಾದ್ಯಂತ 161 ಬೆಂಬಲ ವ್ಯಕ್ತಿಗಳನ್ನು (Support Persons) ನೇಮಿಸಲಾಗಿದೆ.<br>• ಮಕ್ಕಳ ರಕ್ಷಣಾ ನೀತಿ 2016 ಮತ್ತು ತಿದ್ದುಪಡಿ 2023 ಅನ್ನು ಜಾರಿಗೆ ತರಲಾಗಿದೆ.<br>• ದಿನಾಂಕ:18.11.2025ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಿಕ್ಷಣಇಲಾಖೆ ಇವರೊಂದಿಗೆ ನಡೆದ ಸಭೆಯಲ್ಲಿ ಪ್ರತಿ ಶಾಲೆಯಲ್ಲಿ ಮಕ್ಕಳ ರಕ್ಷಣಾ ಸಮಿತಿಯನ್ನು ರಚಿಸುವ ಸಂಬಂಧ ಚರ್ಚಿಸಿದ್ದು, ಸಮಿತಿಯ ರಚನೆಗೆ ಕ್ರಮವಹಿಸಲಾಗುತ್ತಿದೆ. |

ಮಮಇ 24 ಮಭಾಬ 2026

(ಲಕ್ಷ್ಮೀ ಆರ್. ಹೆಬ್ಬಾಳ್ಕರ್)
ಮಹಿಳಾ ಮತ್ತುಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರೀಕರ
ಸಬಲೀಕರಣ ಸಚಿವರು.

ಅನುಬಂಧ – 1

**Districtwise Year wise Age wise teenage Pregnancy Details from RCH portal for LAQ (509)**

| l. No | District | 2020-21 | | | 2021-22 | | | 2022-23 | | | 2023-24 | | | 2024-25 | | | 2025-26 (Apr-Dec 2025) as on 7-01-2026 | | |
|---|---|---|---|---|---|---|---|---|---|---|---|---|---|---|---|---|---|---|---|
| | | Total PW reg | < 18 PW | > 18 PW | Total PW reg | < 18 PW | > 18 PW | Total PW reg | < 18 PW | > 18 PW | Total PW reg | < 18 PW | > 18 PW | Total PW reg | < 18 PW | > 18 PW | Total PW reg | < 18 PW | > 18 PW |
| 1 | Bagalkote | 39754 | 361 | 39,393 | 38690 | 406 | 38,284 | 39659 | 594 | 39,065 | 38323 | 311 | 38,012 | 38007 | 81 | 37926 | 28028 | 49 | 27979 |
| 2 | Ballari | 35273 | 359 | 34,914 | 33584 | 394 | 33,190 | 35621 | 573 | 35,048 | 33697 | 474 | 33,223 | 33859 | 252 | 33607 | 26012 | 167 | 25845 |
| 3 | Belagavi | 89907 | 730 | 89,177 | 91523 | 698 | 90,825 | 93101 | 773 | 92,328 | 90628 | 494 | 90,134 | 87562 | 265 | 87297 | 64500 | 148 | 64352 |
| 4 | Bengaluru Rural | 15108 | 234 | 14,874 | 14924 | 203 | 14,721 | 16029 | 206 | 15,823 | 15920 | 141 | 15,779 | 15709 | 41 | 15668 | 11652 | 25 | 11627 |
| 5 | Bengaluru Urban | 138902 | 1,659 | 1,37,243 | 152648 | 1,724 | 1,50,924 | 193622 | 1,681 | 1,91,941 | 202879 | 841 | 2,02,038 | 199942 | 391 | 199551 | 143884 | 223 | 143661 |
| 6 | Bidar | 34406 | 324 | 34,082 | 35444 | 466 | 34,978 | 36171 | 588 | 35,583 | 34389 | 264 | 34,125 | 37047 | 74 | 36973 | 27518 | 80 | 27438 |
| 7 | Chamarajanagara | 11594 | 240 | 11,354 | 10854 | 224 | 10,630 | 11246 | 199 | 11,047 | 10677 | 67 | 10,610 | 10503 | 36 | 10467 | 7853 | 19 | 7834 |
| 8 | Chikkaballapura | 18961 | 453 | 18,508 | 17901 | 417 | 17,484 | 18072 | 268 | 17,804 | 17753 | 152 | 17,601 | 17467 | 81 | 17386 | 13164 | 34 | 13130 |
| 9 | Chikkamagaluru | 13853 | 249 | 13,604 | 13765 | 196 | 13,569 | 14476 | 191 | 14,285 | 13362 | 152 | 13,210 | 12874 | 86 | 12788 | 9999 | 54 | 9945 |
| 10 | Chitradurga | 29373 | 716 | 28,657 | 27910 | 814 | 27,096 | 28312 | 809 | 27,503 | 27133 | 661 | 26,472 | 25982 | 284 | 25698 | 18524 | 115 | 18409 |
| 11 | Dakshina Kannada | 27915 | 50 | 27,865 | 28456 | 40 | 28,416 | 28588 | 27 | 28,561 | 26125 | 25 | 26,100 | 25785 | 25 | 25760 | 20068 | 22 | 20046 |
| 12 | Davanagere | 25154 | 386 | 24,768 | 24787 | 384 | 24,403 | 25983 | 442 | 25,541 | 25207 | 222 | 24,985 | 25838 | 70 | 25768 | 19859 | 47 | 19812 |
| 13 | Dharwad | 32438 | 111 | 32,327 | 32673 | 135 | 32,538 | 34697 | 167 | 34,530 | 32892 | 111 | 32,781 | 32925 | 41 | 32884 | 24460 | 9 | 24451 |
| 14 | Gadag | 20105 | 65 | 20,040 | 19679 | 64 | 19,615 | 20536 | 89 | 20,447 | 20281 | 61 | 20,220 | 19051 | 36 | 19015 | 14602 | 11 | 14591 |
| 15 | Hassan | 23839 | 398 | 23,441 | 23321 | 327 | 22,994 | 24318 | 324 | 23,994 | 22144 | 251 | 21,893 | 21530 | 163 | 21367 | 17079 | 95 | 16984 |
| 16 | Haveri | 26,788 | 164 | 26,624 | 27,093 | 189 | 26,904 | 28,968 | 254 | 28,714 | 29,193 | 159 | 29,034 | 28475 | 92 | 28383 | 21232 | 28 | 21204 |
| 17 | Kalaburagi | 61,432 | 332 | 61,100 | 59,200 | 444 | 58,756 | 59,334 | 963 | 58,371 | 58,883 | 335 | 58,548 | 59734 | 79 | 59655 | 43385 | 47 | 43338 |
| 18 | Kodagu | 6,886 | 80 | 6,806 | 7,306 | 91 | 7,215 | 7,464 | 102 | 7,362 | 7,366 | 78 | 7,288 | 7870 | 105 | 7765 | 5969 | 60 | 5909 |
| 19 | Kolar | 24,053 | 489 | 23,564 | 23,058 | 542 | 22,516 | 22,954 | 474 | 22,480 | 21,955 | 312 | 21,643 | 21113 | 149 | 20964 | 15196 | 63 | 15133 |
| 20 | Koppal | 30,574 | 134 | 30,440 | 30,560 | 111 | 30,449 | 30,934 | 154 | 30,780 | 29,172 | 248 | 28,924 | 28794 | 145 | 28649 | 22410 | 91 | 22319 |
| 21 | Mandya | 23,347 | 558 | 22,789 | 22,547 | 452 | 22,095 | 21,302 | 392 | 20,910 | 19,653 | 225 | 19,428 | 18920 | 133 | 18787 | 14045 | 48 | 13997 |
| 22 | Mysuru | 38,368 | 923 | 37,445 | 38,884 | 945 | 37,939 | 38,961 | 731 | 38,230 | 38,046 | 296 | 37,750 | 38156 | 175 | 37981 | 28651 | 113 | 28538 |
| 23 | Raichur | 47,461 | 354 | 47,107 | 44,642 | 381 | 44,261 | 44,870 | 567 | 44,303 | 42,793 | 505 | 42,288 | 41643 | 680 | 40963 | 29841 | 505 | 29336 |
| 24 | Ramanagara | 14,512 | 251 | 14,261 | 14,343 | 219 | 14,124 | 13,571 | 201 | 13,370 | 14,243 | 117 | 14,126 | 14449 | 73 | 14376 | 10709 | 42 | 10667 |
| 25 | Shivamogga | 23,243 | 246 | 22,997 | 24,604 | 202 | 24,402 | 25,373 | 185 | 25,188 | 23,525 | 165 | 23,360 | 23625 | 65 | 23560 | 18483 | 56 | 18427 |
| 26 | Tumakuru | 37,695 | 620 | 37,075 | 37,109 | 659 | 36,450 | 37,111 | 681 | 36,430 | 36,132 | 434 | 35,698 | 34382 | 430 | 33952 | 25817 | 262 | 25555 |
| 27 | Udupi | 13,786 | 22 | 13,764 | 13,760 | 16 | 13,744 | 14,265 | 18 | 14,247 | 13,888 | 11 | 13,877 | 13704 | 13 | 13691 | 10212 | 10 | 10202 |
| 28 | Uttara Kannada | 17,411 | 67 | 17,344 | 18,644 | 63 | 18,581 | 18,843 | 48 | 18,795 | 17,671 | 40 | 17,631 | 17269 | 28 | 17241 | 12849 | 17 | 12832 |
| 29 | Vijayanagar | | | | | | | 27986 | 281 | 27,705 | 27,549 | 204 | 27,345 | 27597 | 59 | 27538 | 21901 | 25 | 21876 |
| 30 | Vijayapura | 57,796 | 592 | 57,204 | 56,288 | 733 | 55,555 | 56,538 | 1,026 | 55,512 | 53,440 | 751 | 52,689 | 56436 | 366 | 56070 | 41188 | 141 | 41047 |
| 31 | Yadgir | 32,353 | 198 | 32,155 | 31,876 | 267 | 31,609 | 32,408 | 519 | 31,889 | 31,110 | 471 | 30,639 | 31428 | 49 | 31379 | 22280 | 120 | 22160 |
| | Total | 10,12,287 | 11,365 | 10,00,922 | 10,16,073 | 11,806 | 10,04,267 | 1101313 | 13,527 | 10,87,786 | 10,76,029 | 8,578 | 10,67,451 | 1067676 | 4567 | 1063109 | 791370 | 2726 | 788644 |

**ote : This RCH data is provisional and may change anytime by health facilities as the portal is not freezed by GOI MOHFW.**

ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು

ಅನುಬಂಧ - ೨

# CHILD MARRIAGE RESTRAINT ACT CASES FOR THE YEAR 2021TO 2026 (JANUARY 20TH)

| SL NO | District/Units Name | 2021 | | 2022 | | 2023 | | 2024 | | 2025 | | 2026 | |
|---|---|---|---|---|---|---|---|---|---|---|---|---|---|
| | | Reported | Convicted | Reported | Convicted | Reported | Convicted | Reported | Convicted | Reported | Convicted | Reported | Convicted |
| 1 | Bagalkot | 38 | 0 | 37 | 0 | 21 | 0 | 15 | 0 | 6 | 0 | 1 | 0 |
| 2 | Ballari | 13 | 0 | 4 | 0 | 3 | 0 | 3 | 0 | 6 | 0 | 0 | 0 |
| 3 | Belagavi City | 0 | 0 | 0 | 0 | 0 | 0 | 1 | 0 | 1 | 0 | 0 | 0 |
| 4 | Belagavi Dist | 16 | 0 | 18 | 0 | 18 | 0 | 11 | 0 | 20 | 0 | 0 | 0 |
| 5 | Bengaluru City | 15 | 0 | 11 | 0 | 6 | 0 | 5 | 0 | 4 | 0 | 0 | 0 |
| 6 | Bengaluru Dist | 9 | 0 | 5 | 0 | 3 | 0 | 6 | 0 | 3 | 0 | 0 | 0 |
| 7 | Bengaluru South | 9 | 0 | 13 | 0 | 9 | 0 | 8 | 0 | 12 | 0 | 1 | 0 |
| 8 | Bidar | 0 | 0 | 0 | 0 | 2 | 0 | 0 | 0 | 2 | 0 | 0 | 0 |
| 9 | Chamarajanagar | 4 | 0 | 0 | 0 | 4 | 0 | 2 | 0 | 2 | 0 | 0 | 0 |
| 10 | Chickballapura | 3 | 0 | 8 | 0 | 5 | 0 | 5 | 0 | 6 | 0 | 0 | 0 |
| 11 | Chikkamagaluru | 10 | 0 | 6 | 0 | 2 | 0 | 1 | 0 | 3 | 0 | 0 | 0 |
| 12 | Chitradurga | 5 | 0 | 2 | 0 | 0 | 0 | 3 | 0 | 2 | 0 | 0 | 0 |
| 13 | CID | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 14 | Coastal Security | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 15 | Dakshina Kannada | 1 | 0 | 0 | 0 | 0 | 0 | 0 | 0 | 0 | 0 | 0 | 0 |
| 16 | Davanagere | 1 | 0 | 6 | 0 | 2 | 0 | 1 | 0 | 1 | 0 | 0 | 0 |
| 17 | Dharwad | 11 | 0 | 6 | 0 | 2 | 0 | 2 | 0 | 1 | 0 | 0 | 0 |
| 18 | Gadag | 5 | 0 | 5 | 0 | 1 | 0 | 0 | 0 | 3 | 0 | 2 | 0 |
| 19 | Hassan | 22 | 1 | 13 | 0 | 4 | 0 | 10 | 0 | 20 | 0 | 0 | 0 |
| 20 | Haveri | 0 | 0 | 1 | 0 | 3 | 0 | 3 | 0 | 2 | 0 | 0 | 0 |
| 21 | Hubballi Dharwad City | 0 | 0 | 2 | 0 | 3 | 0 | 2 | 0 | 2 | 0 | 0 | 0 |
| 22 | ISD Bengaluru | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 23 | K.G.F | 0 | 0 | 1 | 0 | 0 | 0 | 0 | 0 | 0 | 0 | 0 | 0 |
| 24 | Kalaburagi | 4 | 0 | 4 | 1 | 2 | 0 | 3 | 0 | 11 | 0 | 0 | 0 |
| 25 | Kalaburagi City | 2 | 0 | 4 | 0 | 1 | 0 | 2 | 0 | 3 | 0 | 0 | 0 |
| 26 | Karnataka Railways | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 27 | Kodagu | 1 | 0 | 2 | 0 | 2 | 1 | 1 | 0 | 0 | 0 | 0 | 0 |
| 28 | Kolar | 3 | 0 | 5 | 0 | 3 | 0 | 2 | 0 | 1 | 0 | 0 | 0 |
| 29 | Koppal | 3 | 0 | 4 | 0 | 2 | 0 | 3 | 0 | 6 | 0 | 0 | 0 |
| 30 | Mandya | 17 | 0 | 10 | 0 | 7 | 0 | 8 | 0 | 17 | 0 | 0 | 0 |
| 31 | Mangaluru City | 0 | 0 | 0 | 0 | 2 | 0 | 5 | 0 | 1 | 0 | 0 | 0 |
| 32 | Mysuru City | 6 | 0 | 4 | 0 | 1 | 0 | 7 | 0 | 7 | 0 | 0 | 0 |
| 33 | Mysuru Dist | 17 | 1 | 10 | 0 | 11 | 0 | 11 | 0 | 6 | 0 | 1 | 0 |
| 34 | Raichur | 11 | 0 | 1 | 0 | 5 | 0 | 2 | 0 | 3 | 0 | 0 | 0 |
| 35 | Shivamogga | 3 | 0 | 3 | 0 | 4 | 0 | 5 | 0 | 3 | 0 | 0 | 0 |
| 36 | Tumakuru | 3 | 0 | 8 | 0 | 2 | 0 | 2 | 0 | 13 | 0 | 0 | 0 |
| 37 | Udupi | 0 | 0 | 0 | 0 | 1 | 0 | 0 | 0 | 0 | 0 | 0 | 0 |
| 38 | Uttara Kannada | 1 | 0 | 1 | 0 | 0 | 0 | 1 | 0 | 2 | 0 | 0 | 0 |
| 39 | Vijayanagara | 2 | 0 | 5 | 0 | 4 | 0 | 0 | 0 | 2 | 0 | 0 | 0 |
| 40 | Vijayapura | 24 | 0 | 14 | 0 | 6 | 0 | 9 | 0 | 15 | 0 | 1 | 0 |
| 41 | Yadgir | 4 | 0 | 3 | 0 | 2 | 0 | 11 | 0 | 11 | 0 | 1 | 0 |
| | **Grand Total** | **263** | **2** | **216** | **1** | **143** | **1** | **150** | **0** | **197** | **0** | **7** | **0** |

ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ

ಅನುಬಂಧ-3

## POCSO CASES FOR THE YEAR 2021 TO 2026 UPTO 20th JANUARY

| Sl No | Unit Name | 2021 | | 2022 | | 2023 | | 2024 | | 2025 | | 2026 20th JAN | |
|---|---|---|---|---|---|---|---|---|---|---|---|---|---|
| | | Rep | Convicted | Rep | Convicted | Rep | Convicted | Rep | Convicted | Rep | Convicted | Rep | Convicted |
| 1 | Bagalkot | 47 | 0 | 43 | 3 | 60 | 5 | 67 | 6 | 78 | 0 | 2 | 0 |
| 2 | Ballari | 43 | 1 | 39 | 0 | 52 | 0 | 56 | 0 | 147 | 0 | 2 | 0 |
| 3 | Belagavi City | 33 | 1 | 27 | 0 | 19 | 1 | 30 | 0 | 49 | 0 | 3 | 0 |
| 4 | Belagavi Dist | 109 | 6 | 133 | 9 | 117 | 6 | 137 | 3 | 175 | 1 | 12 | 0 |
| 5 | Bengaluru City | 417 | 33 | 501 | 26 | 628 | 18 | 643 | 1 | 591 | 0 | 23 | 0 |
| 6 | Bengaluru Dist | 77 | 9 | 88 | 7 | 99 | 5 | 112 | 0 | 119 | 0 | 4 | 0 |
| 7 | Bengaluru South | 95 | 4 | 86 | 0 | 119 | 0 | 113 | 1 | 104 | 0 | 5 | 0 |
| 8 | Bidar | 41 | 6 | 48 | 2 | 59 | 5 | 60 | 2 | 57 | 0 | 0 | 0 |
| 9 | Chamarajanagar | 48 | 11 | 48 | 3 | 84 | 0 | 90 | 0 | 89 | 0 | 2 | 0 |
| 10 | Chickballapura | 163 | 11 | 141 | 4 | 169 | 0 | 190 | 0 | 184 | 0 | 8 | 0 |
| 11 | Chikkamagaluru | 110 | 12 | 124 | 9 | 111 | 5 | 122 | 5 | 164 | 2 | 6 | 0 |
| 12 | Chitradurga | 83 | 6 | 93 | 4 | 131 | 5 | 150 | 1 | 168 | 0 | 7 | 0 |
| 13 | CID | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 14 | Coastal Security Police | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 15 | Dakshina Kannada | 55 | 2 | 69 | 6 | 89 | 7 | 69 | 9 | 85 | 0 | 3 | 0 |
| 16 | Davanagere | 88 | 11 | 97 | 8 | 109 | 8 | 110 | 1 | 113 | 0 | 4 | 0 |
| 17 | Dharwad | 26 | 3 | 33 | 0 | 42 | 0 | 46 | 0 | 29 | 0 | 1 | 0 |
| 18 | Gadag | 19 | 6 | 39 | 6 | 48 | 0 | 38 | 0 | 59 | 0 | 3 | 0 |
| 19 | Hassan | 142 | 1 | 153 | 2 | 168 | 2 | 157 | 0 | 182 | 0 | 8 | 0 |
| 20 | Haveri | 78 | 4 | 79 | 4 | 91 | 3 | 125 | 0 | 159 | 0 | 6 | 0 |
| 21 | Hubballi Dharwad City | 38 | 3 | 42 | 5 | 45 | 2 | 66 | 0 | 58 | 0 | 3 | 0 |
| 22 | ISD | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 23 | K.G.F | 20 | 5 | 30 | 4 | 50 | 5 | 48 | 1 | 36 | 0 | 1 | 0 |
| 24 | Kalaburagi | 55 | 10 | 54 | 9 | 59 | 14 | 65 | 3 | 92 | 0 | 4 | 0 |
| 25 | Kalaburagi City | 31 | 3 | 21 | 6 | 34 | 6 | 31 | 3 | 45 | 0 | 0 | 0 |
| 26 | Karnataka Railways | 2 | 0 | 2 | 1 | 4 | 0 | 5 | 1 | 2 | 0 | 1 | 0 |
| 27 | Kodagu | 65 | 7 | 68 | 8 | 68 | 3 | 80 | 1 | 110 | 1 | 1 | 0 |
| 28 | Kolar | 61 | 9 | 67 | 7 | 120 | 5 | 105 | 2 | 129 | 0 | 2 | 0 |
| 29 | Koppal | 43 | 2 | 71 | 6 | 58 | 3 | 69 | 1 | 80 | 0 | 2 | 0 |
| 30 | Mandya | 99 | 6 | 106 | 11 | 140 | 10 | 151 | 0 | 153 | 0 | 6 | 0 |
| 31 | Mangaluru City | 62 | 6 | 66 | 8 | 52 | 6 | 64 | 9 | 79 | 0 | 3 | 0 |
| 32 | Mysuru City | 43 | 1 | 56 | 1 | 74 | 1 | 71 | 0 | 71 | 0 | 1 | 0 |
| 33 | Mysuru Dist | 119 | 10 | 145 | 7 | 158 | 2 | 139 | 2 | 171 | 0 | 6 | 0 |
| 34 | Raichur | 50 | 1 | 58 | 0 | 75 | 1 | 96 | 0 | 81 | 0 | 4 | 0 |
| 35 | Shivamogga | 149 | 8 | 187 | 15 | 211 | 9 | 229 | 1 | 257 | 1 | 17 | 0 |
| 36 | Tumakuru | 105 | 23 | 106 | 18 | 177 | 15 | 176 | 2 | 218 | 0 | 4 | 0 |
| 37 | Udupi | 58 | 17 | 68 | 10 | 58 | 10 | 61 | 5 | 49 | 2 | 3 | 0 |
| 38 | Uttara Kannada | 51 | 7 | 63 | 5 | 68 | 0 | 81 | 0 | 81 | 0 | 3 | 0 |
| 39 | Vijayanagara | 54 | 0 | 56 | 0 | 119 | 0 | 74 | 0 | 104 | 0 | 6 | 0 |
| 40 | Vijayapura | 59 | 5 | 57 | 1 | 100 | 5 | 100 | 2 | 126 | 3 | 2 | 0 |
| 41 | Yadgir | 46 | 0 | 47 | 0 | 38 | 0 | 52 | 0 | 116 | 0 | 4 | 0 |
| | **Grand Total** | **2884** | **250** | **3211** | **215** | **3903** | **167** | **4078** | **62** | **4610** | **10** | **172** | **0** |

ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ